## ಆದೇಶ

ಅರ್ಜಿದಾರರು ಮಧ್ಯಂತರ ಅರ್ಜಿ ಸಂಖ್ಯೆ 6 ರಿಂದ 8 ದಿವಾಣಿ ಪ್ರಕ್ರಿಯಾ ಸಂಹಿತೆ ಕ್ರಮಾದೇಶ 22 ನಿಯಮ 3, 22 ನಿಯಮ 9 ಹಾಗೂ ಕಾಲಪರಿಮಿತಿ ಅಧಿನಿಯಮ ಕಲಂ.5 ರಂತೆ ಅರ್ಜಿಯನ್ನು ದಾಖಲು ಮಾಡಿ ವಾದಿಯು ದಿ. 01.07.2025 ರಂದು ಮರಣ ಹೊಂದಿದ್ದು, ಸದರಿಯವರ ಕಾನೂನುಬದ್ದ ವಾರಸುದಾರರನ್ನು ದಾವೆಗೆ ತರಲು ಅನುಮತಿ ಕೋರಿ ಅರ್ಜಿಗಳನ್ನು ದಾಖಲು ಮಾಡಿರುತ್ತಾರೆ.

2. ಅರ್ಜಿಯ ಜೊತೆ ಲಗತ್ತಿಸಿರುವ ಪ್ರಮಾಣ ಪತ್ರಿಕೆಯಲ್ಲಿ, ಅರ್ಜಿದಾರರು ಅರ್ಜಿಯನ್ನು ದಾಖಲು ಮಾಡಿ, ವಾದಿಯು ಮರಣ ಹೊಂದಿದ್ದು, ಅವರ ಕಾನೂನುಬದ್ದ ವಾರಸುದಾರರನ್ನು ಕಡತಕ್ಕೆ ತರುವುದು ಅವಶ್ಯಕವಾಗಿರುತ್ತದೆ. ಹಾಗಾಗಿ, ಸದರಿಯವರು ಕಾನೂನುಬದ್ದ ವಾರಸುದಾರರಾಗಿರುತ್ತಾರೆ ಆದ್ದರಿಂದ, ಸದರಿಯವರನ್ನು ಕಡತಕ್ಕೆ ತರಲು ಅನುಮತಿ ನೀಡಿ, ದಾವೆಯನ್ನು ಮನ್ನೆಡೆಸಿಕೊಂಡು ಹೋಗಲು ಅನುಮತಿಯನ್ನು ಕೋರಿಕೊಂಡಿರುತ್ತಾರೆ. ಹಾಗೂ ಕಾಲಪರಿಮಿತಿ ಮೀರಿ ಅರ್ಜಿಯನ್ನು ಸಲ್ಲಿಸಿರುವ ಕಾರಣ, ಅದನ್ನು ಮನ್ನಿಸಿ ಅನುಮತಿ ನೀಡಬೇಕಾಗಿ ಕೋರಿಕೊಂಡಿರುತ್ತಾರೆ.

3. ಸದರಿ ಅರ್ಜಿಯ ಎದುರುದಾರರುಗಳಿಗೆ ನ್ಯಾಯಾಲಯವು ನೋಟಿಸ್ ನೀಡಿದ್ದು, ನೋಟಿಸ್ ಪಡೆದ ಎದುರುದಾರರು ವಕೀಲರ ಮೂಲಕ ಹಾಜರಾಗಿರುತ್ತಾರೆ. ಹಾಗೂ ಮೇಲ್ಕಂಡ ಅರ್ಜಿಗೆ ತಮ್ಮ ತಕರಾರು ಇಲ್ಲಾ ಎಂಬುದಾಗಿ ತಿಳಿಸಿರುತ್ತಾರೆ.

4. ಅರ್ಜಿದಾರರ ಪರ ವಾದವನ್ನು ಆಲಿಸಲಾಯಿತು.

5. ನ್ಯಾಯಾಲಯದ ಸಮಕ್ಷಮ ಇರುವ ದಾಖಲಾತಿಗಳನ್ನು ಪರಿಶೀಲಿಸಲಾಗಿ, ವಾದಿಯು ದಾವಾ ಅನುಸೂಚಿತ ಸ್ವತ್ತಿಗೆ ಸಂಬಂಧಿಸಿದಂತೆ ಪ್ರತಿವಾದಿಯರ ವಿರುದ್ದ ಶಾಶ್ವತ ಮತ್ತು ಆಜ್ಞಾಪಕ ನಿರ್ಭಂದಕಾಜ್ಞೆಯನ್ನು ಕೋರಿ ದಾವೆಯನ್ನು ದಾಖಲು ಮಾಡಿರುತ್ತಾರೆ. ಈ ಪ್ರಕರಣದಲ್ಲಿ ದಾವೆ ವಿಲೆಗಾಗಿ ಬಾಕಿ ಇರುವಾಗ ವಾದಿಯು ಮರಣ ಹೊಂದಿರುತ್ತಾರೆ. ಹಾಗಾಗಿ ಅವರ ಕಾನೂನುಬದ್ದ ವಾರಸುದಾರರು ತಮ್ಮನ್ನು ಕಡತಕ್ಕೆ ತರಲು ಮೇಲ್ಕಂಡ ಅರ್ಜಿಯನ್ನು ಸಲ್ಲಿಸಿಕೊಂಡಿರುತ್ತಾರೆ. ವಾದಿಯು, ದಾವಾ ಅನುಸೂಚಿತ ಸ್ವತ್ತಿಗೆ ಸಂಬಂಧಿಸಿದಂತೆ ಪ್ರತಿವಾದಿಯರ ವಿರುದ್ದ ಶಾಶ್ವತ ನಿರ್ಭಂದಕಾಜ್ಞೆ ಕೋರಿ ದಾವೆಯನ್ನು ದಾಖಲು ಮಾಡಿರುತ್ತಾರೆ ಎಂಬುದು ಸರಿಯಷ್ಟೇ ಹಾಗೂ ಶಾಶ್ವತ ನಿರ್ಭಂದಕಾಜ್ಞೆಯು ವೈಯಕ್ತಿಕ ಹಕ್ಕಾಗಿದ್ದು, ಸದರಿ ಪರಿಹಾರವನ್ನು ಕೋರಿ ಸಲ್ಲಿಸಿದ್ದ, ದಾವೆಯು ವಾದಿಯ ಮರಣದಿಂದ ಕೊನೆಗೊಳ್ಳುತ್ತದೆ ಎಂಬುದು ಸರಿಯಷ್ಟೇ. ಆದರೆ **ಮಾನ್ಯ ಕರ್ನಾಟಕ ಉಚ್ಚ ನ್ಯಾಯಾಲಯವು ಆರ್.ಎಸ್.ಎ** 743/2011, **ಚನ್ನಯ್ಯ ಅಲಿಯಾಸ್ ದೊಡ್ಡ ಚನ್ನಯ್ಯ ಮತ್ತು ಇತರರು ವಿರುದ್ದ ಬಾಳಪ್ಪ ಮತ್ತು ಇತರರು ಪ್ರಕರಣದ** ಖಂಡಿಕೆ 58 ರಿಂದ 60 ರಲ್ಲಿ,

> ***58. The right to enjoy possession of an immovable property is not a right that can be enjoyed only by one person and it is not a right that cannot survive beyond the life of that person. The right to enjoy property is a transferable right and thus is not limited to any one person. On the death of a person, the right to enjoy possession of that property can and does survive to his legal representatives.***
>
> ***59. A legal representatives is defined under section 2 (11) of the CPC and the same reads as under:***
>
> ***"Legal representative" means a persons who in law represents the estate of a deceased person, and includes any person who intermeddled with the estate of the deceased and where a party sues or is sued in a representative character the person on whom the estate devolves on the death of the party to suing or sued.***

***60. As could be seen from the said definition, a person who intermeddled with the estate of the deceased is also considered a legal representative. Thus, a person in whose favour the rights of a property devolve by operation of law or by way of testament would be a legal representative since he acquires a right to intermeddle with the estate of the deceased. Thus, it is clear that in a suit relating to the grant of a perpetual injunction in respect of immovable property, the right to sue is not personal to the plaintiff but survives to his legal representative and the suit for injunction would not therefore abate.***

ಎಂಬುದಾಗಿ ತಿಳಿಸಿರುತ್ತಾರೆ. ಅದರಂತೆ, ಯಾವುದೇ ಒಂದು ಸ್ವತ್ತಿನ ಸ್ವಾಧೀನಾನುಭವವನ್ನು ಹೊಂದಿದ ವ್ಯಕ್ತಿ ಮರಣ ಹೊಂದುವುದರಿಂದ ಆತನ ಕಾನೂನುಬದ್ದ ವಾರಸುದಾರರಿಗೆ, ಸದರಿ ಸ್ವತ್ತು ವರ್ಗಾವಣೆಯಾಗಿ ಆ ಮೂಲಕ ಸ್ವಾಧೀನಾನುಭವವು ಸಹ ವರ್ಗಾವಣೆಯಾಗುತ್ತದೆ. ಹಾಗಾಗಿ ಶಾಶ್ವತ ನಿರ್ಬಂದಕಾಜ್ಞೆ ದಾವೆಯಲ್ಲಿ ವಾದಿಯ ಮರಣದಿಂದ ದಾವೆಯು ಕೊನೆಗೊಳ್ಳುವುದಿಲ್ಲ. ಈ ಪ್ರಕರಣದಲ್ಲಿ ವಾದಿಯು ಮರಣ ಹೊಂದಿರುತ್ತಾರೆ, ಹಾಗೂ ಅರ್ಜಿದಾರರುಗಳು ವಾದಿಯ ಕಾನೂನುಬದ್ದ ವಾರಸುದಾರರು ಎಂಬುದಕ್ಕೆ ಯಾವುದೇ ತಕರಾರು ಇರುವುದಿಲ್ಲ. ಆದ ಕಾರಣ, ದಾವಾ ಅನುಸೂಚಿತ ಸ್ವತ್ತಿನಲ್ಲಿ ವಾದಿಯ ಕಾನೂನುಬದ್ದ ವಾರಸುದಾರರು ಅವರ ನಂತರ ಸ್ವಾಧೀನಾನುಭವವನ್ನು ಪಡೆದುಕೊಂಡಿರುತ್ತಾರೆ. ಹಾಗಾಗಿ, ಅರ್ಜಿದಾರರುಗಳು ಈ ದಾವೆಯನ್ನು ಮುನ್ನೆಡಸಲು ಅವಕಾಶ ಇರುತ್ತದೆ. ಈ ಎಲ್ಲಾ ಕಾರಣಗಳಿಂದಾಗಿ ಈ ಕೆಳಕಂಡ ಮಾಡುವ ಆದೇಶವೇನೆಂದರೆ,

## ಆದೇಶ

ಅರ್ಜಿದಾರರು ಸಲ್ಲಿಸಿರುವ ಮಧ್ಯಂತರ ಅರ್ಜಿ ಸಂಖ್ಯೆ 2 ರಿಂದ 4ನ್ನು ತಲಾ ರೂ.200/- ಗಳ ಖರ್ಚಿನೊಂದಿಗೆ ಪುರಸ್ಕರಿಸಲಾಗಿರುತ್ತದೆ.

ವಾದಪತ್ರವನ್ನು ತಿದ್ದುಪಡಿ ಮಾಡಲು ಹಾಗೂ ತಿದ್ದುಪಡಿ ವಾದಪತ್ರವನ್ನು ಸಲ್ಲಿಸುವ ದಿನಾಂಕಃ **01.12.2025.**

(ಈ ಆದೇಶವನ್ನು ಶೀಘ್ರಲಿಪಿಗಾರರಿಗೆ ಉಕ್ತಲೇಖನ ಕೊಟ್ಟು, ಗಣಕಯಂತ್ರದಲ್ಲಿ ಬೆರಳಚ್ಚು ಮಾಡಿದ ನಂತರ, ಅವರು ತಯಾರಿಸಿದ ಪ್ರತಿಯನ್ನು ಓದಿ ತಿದ್ದಿ ತೆರೆದ ನ್ಯಾಯಾಲಯದಲ್ಲಿ ದಿನಾಂಕ:17.11.2025 ರಂದು ಘೋಷಿಸಲಾಯಿತು)

**(ಕಾವ್ಯಶ್ರೀ ಎಂ)**
ಪ್ರಧಾನ ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ.,
ಕೊಳ್ಳೇಗಾಲ.